

ಕೊರೊನಾ ಮೂರನೇ ಅಲೆ ಆತಂಕದಿಂದ ಪ್ರವಾಸಿಗರ ಸಂಖ್ಯೆ ತಗ್ಗಿದೆ. ಹೋಟೆಲ್‌ಗಳನ್ನು ನಡೆಸುತ್ತಿದ್ದವರಿಗೆ, ಜನಪದ ಕಲಾವಿದರಿಗೆ, ಗೈಡ್‌ಗಳಿಗೆ ದೊಡ್ಡ ಹೊಡೆತ ಬಿದ್ದಿದೆ. ಟ್ಯಾಕ್ಸಿಗಳನ್ನು ಮಾರಾಟ ಮಾಡಿಕೊಂಡು ಹೋಗುತ್ತಿದ್ದಾರೆ. ಟೂರಿಸ್ಟ್ ಬಸ್‌ಗಳನ್ನು ಕೇಳುವವರೇ ಇಲ್ಲ.

**-ಎಂ. ರವಿ,**
'ಕರ್ನಾಟಕ ಟೂರಿಸಂ ಪೋರಂ'
ಉಪಾಧ್ಯಕ್ಷ

ತೆಗೆದುಕೊಂಡೇ ಬರುತ್ತಾರೆ. ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯ ನಿಯಮ, ನಿರ್ಬಂಧಗಳಿದ್ದರೆ ಪ್ರವಾಸಿಗರೂ ಗೊಂದಲಕ್ಕೆ ಸಿಲುಕುತ್ತಾರೆ. ಟೂರ್ ಸಹವಾಸವೇ ಬೇಡವೆಂದು ಮನೆಯಲ್ಲಿ ಕುಳಿತುಕೊಳ್ಳುತ್ತಾರೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಭವಿಷ್ಯದಲ್ಲಿ ಈ ಉದ್ಯಮದ ಚೇತರಿಕೆ ಕಷ್ಟವಾಗಬಹುದು' ಎಂದು ಮಹಾಲಿಂಗಯ್ಯ ಆತಂಕ ವ್ಯಕ್ತಪಡಿಸುತ್ತಾರೆ.

'ಟೂರ್, ಟ್ರಾವೆಲ್ಸ್ ಆ್ಯಂಡ್ ಹಾಸ್ಪಿಟಾಲಿಟಿ' ಕ್ಷೇತ್ರದಲ್ಲಿ ಶೇ 98ರಿಂದ ಶೇ 99ರಷ್ಟು ವಹಿವಾಟು ಅಥವಾ ಪಾವತಿ ಪ್ರಕ್ರಿಯೆಯು ಆನ್‌ಲೈನ್‌ನಲ್ಲಿಯೇ ನಡೆಯುತ್ತದೆ. ಬೇರೆಲ್ಲ ಕ್ಷೇತ್ರಗಳಿಗಿಂತ ಹೆಚ್ಚು 'ಡಿಜಿಟಲ್' ಆಗಿರುವ ವಲಯವಿದು. ಭವಿಷ್ಯದಲ್ಲಿಯೂ ಕೋವಿಡ್ ಮಾರ್ಗಸೂಚಿಗಳನ್ನು ಹೆಚ್ಚು ಕಟ್ಟುನಿಟ್ಟಾಗಿ ಪಾಲಿಸುವುದು ಕೂಡ ನಾವೇ' ಎಂಬ ವಿಶ್ವಾಸದ ನುಡಿಗಳನ್ನು ಈ ಕ್ಷೇತ್ರದ ತಜ್ಞರು ಹೇಳುತ್ತಾರೆ.

## ಚಿನ್ನದ ಮೊಟ್ಟೆಯಿಡುವ ಕೋಳಿ!

ರಾಜ್ಯದ ಪಾಲಿಗೆ ಪ್ರವಾಸೋದ್ಯಮವು ಚಿನ್ನದ ಮೊಟ್ಟೆ ಇಡುವ ಕೋಳಿ. ಆದರೆ, ಒಂದೇ ಬಾರಿಗೆ ಎಲ್ಲ ಚಿನ್ನವನ್ನು ಪಡೆಯುವ ದುರಾಸೆಯೂ ಕಾಣುತ್ತಿದೆ. ಸರ್ಕಾರ, ಅಧಿಕಾರಿಗಳು ಹಾಗೂ ಪ್ರವಾಸಿ ಸ್ಥಳಗಳಲ್ಲಿರುವ ಕೆಲವು ವ್ಯಾಪಾರಿಗಳು ಹಾಗೂ ವ್ಯಾಪಾರಿ ಮನೋಭಾವದ ಜನರಲ್ಲಿ



ಶಿವನಸಮುದ್ರದಲ್ಲೀಗ ನೀರಹಾಡು



ಬಂಡೀಪುರದ ಆನೆಗಳು